# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ–ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ–148 ದಿನಾಂಕ:21–09–2022 ರಂದು ಸೆಪ್ಟೆಂಬರ್–2022 ರ ವಾರ್ಡ್ ಸಮಿತಿಯ ಮಾಸಿಕ ಸಭೆಯ ನಡವಳಿಗಳು**

ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಕಛೇರಿ, **Hot mix plant, 80 feet road, ಈಜೀಪುರ, ಬೆಂಗಳೂರು** ರಲ್ಲಿ ದಿನಾಂಕ : 21.09.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:–**

1. ಶ್ರೀ ಲಕ್ಷ್ಮೀಪತಿ
2. ಡಾ. ಪ್ರಕಾಶ್ ರೆಡ್ಡಿ
3. ಶ್ರೀ ಅನಿಲ್ ಕುಮಾರ್
4. ಶ್ರೀ ವಸಂತಕುಮಾರ್
5. ಶ್ರೀ ಎಂ.ಎಸ್. ಗಣೇಶ್

**ಹಾಜರಿದ್ದ ಅಧಿಕಾರಿಗಳು:–**

1. ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148
2. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್–148 ಈಜೀಪುರ
3. ಶ್ರೀ ಎಸ್. ಕುಮಾರವೇಲು, ಹಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
4. ಶ್ರೀ ಟಿ.ಎಸ್. ಮುತ್ತುರಾಜ, ಕಿರಿಯ ಆರೋಗ್ಯ ನಿರೀಕ್ಷಕರು, ಬಿ.ಬಿ.ಎಂ.ಪಿ.
5. ಶ್ರೀ ಟಿ. ನಾಗರಾಜ್, ತೆರಿಗೆ ನಿರೀಕ್ಷಕರು, ಕಂದಾಯ ಇಲಾಖೆ
6. ಶ್ರೀ ವಿಜಯ್ ಕುಮಾರ್, ಕಂದಾಯ ನಿರೀಕ್ಷಕರು, ಕಂದಾಯ ಇಲಾಖೆ
7. ಶ್ರೀ ಮಾರುತಿ ಎಂ.ಎನ್, ಮಾರ್ಷಲ್
8. ಶ್ರೀ ಎನ್. ನಾಗರಾಜ್, ಸೂಪರ್‌ವೈಸರ್, ಬಿ.ಬಿ.ಎಂ.ಪಿ.

* * * * *

ಶ್ರೀಮತಿ ರೂಪ, ಸಹ ಕಂದಾಯ ಅಧಿಕಾರಿಗಳು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಚರ್ಚಿಸುವಂತೆ ತಿಳಿಸಿದರು.

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಮಾನ್ಯ ಆಯುಕ್ತರು ರವರ ಆದೇಶದಂತೆ ಪ್ರತಿ ಮಾಹೆಯಲ್ಲಿ ಮೊದಲನೇ ಮತ್ತು ಮೂರನೇ ಶನಿವಾರಗಳಂದು ವಾರ್ಡ್ ಸಮಿತಿ ಸಭೆಯನ್ನು ನಡೆಸುವಂತೆ ಸಭೆಯಲ್ಲಿ ಕೋರಿರುತ್ತಾರೆ. ಅದಕ್ಕೆ ನೋಡಲ್ ಅಧಿಕಾರಿ ರವರು ಉತ್ತರಿಸಿ, ಪ್ರತಿ ಮಾಹೆಯಲ್ಲಿ ಮೊದಲನೇ ಮತ್ತು ಮೂರನೇ ಶನಿವಾರಗಳಂದು ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಗುವುದು ಎಂದು ತಿಳಿಸಿರುತ್ತಾರೆ.



Scanned by CamScanner

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಸೇಫ್ ಸಿಟಿ ಯೋಜನೆಯಡಿಯಲ್ಲಿ ಮಾನ್ಯ ಪೊಲೀಸ್ ಆಯುಕ್ತರು ರವರ ಕಛೇರಿಯಿಂದ ಈಜೀಪುರ ವಾರ್ಡ್ ವ್ಯಾಪ್ತಿಯ ಮುಖ್ಯರಸ್ತೆಗಳು ಮತ್ತು ಜಂಕ್ಷನ್‌ಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲು ಪಿಲ್ಲರ್‌ಗಳನ್ನು ಸ್ಥಾಪಿಸಿ, ಕಂಬಗಳನ್ನು ಮತ್ತು ಕ್ಯಾಮೆರಾಗಳನ್ನು ಅಳವಡಿಸದೇ ಮೂರು ತಿಂಗಳು ಕಳೆದಿದ್ದು, ಈ ಬಗ್ಗೆ ಕ್ರಮವಹಿಸುವಂತೆ ಸಂಬಂಧಪಟ್ಟ ಇಲಾಖೆಯವರಿಗೆ ತಿಳಿಸುವಂತೆ ಸಭೆಯಲ್ಲಿ ಕೋರಿರುತ್ತಾರೆ.

**ಕ್ರಮ: ಆರಕ್ಷಕ ನಿರೀಕ್ಷಕರು,**
**ವಿವೇಕಾನಗರ ಪೊಲೀಸ್ ಠಾಣೆ**

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಎನ್.ಜಿ.ವಿ. ಆವರಣದಲ್ಲಿ ಜ್ಯುಡಿಷಿಯಲ್ ಬ್ಲಾಕ್‌ನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದ್ದು, ಜ್ಯುಡಿಷಿಯಲ್ ಬ್ಲಾಕ್‌ನಲ್ಲಿ ಹೆಚ್ಚಾಗಿ ನ್ಯಾಯಾಧೀಶರುಗಳು ವಸತಿಗೃಹದಲ್ಲಿ ಇರುವುದರಿಂದ ಭದ್ರತಾ ಕಾರಣದಿಂದಾಗಿ, ಹೊರಗಿನ ಸಾಮಾನ್ಯರಿಗೆ ಆರೋಗ್ಯ ತಪಾಸಣೆಗೆ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಲು ಸಾಧ್ಯವಾಗದಿರುವುದರಿಂದ ಜ್ಯುಡಿಷಿಯಲ್ ಬ್ಲಾಕ್‌ನಿಂದ ಹೊರಗೆ ಆರೋಗ್ಯ ಕೇಂದ್ರವನ್ನು ನಿರ್ಮಿಸಲು ಈ ಹಿಂದೆ ಕೋರಿದ್ದರು. ಈ ಬಗ್ಗೆ ಉತ್ತರಿಸಿದ ಕಾರ್ಯದರ್ಶಿರವರು ಪ್ರಸ್ತುತ ಎನ್.ಜಿ.ವಿ. ಶರಾವತಿ ಬ್ಲಾಕ್‌ನಲ್ಲಿನ ನೆಲ ಮಹಡಿಗೆ ಆರೋಗ್ಯ ಕೇಂದ್ರವನ್ನು ಸ್ಥಳಾಂತರಿಸಲಾಗಿದ್ದು, ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣೆಗೆ ಅನುಕೂಲ ಮಾಡಲಾಗಿರುತ್ತದೆ.

ಶ್ರೀ ಗಣೇಶ್ ರವರು ಮಾತನಾಡಿ, ಈಜೀಪುರದ ಶ್ರೀನಿವಾಗಿಲು ಮುಖ್ಯರಸ್ತೆಯ 22ನೇ ಅಡ್ಡರಸ್ತೆಯಲ್ಲಿ ಮಿಲಿಟರಿ ಬದಿಯ ಹಸಿರವು ಹುಲ್ಲುಗಾವಲಿನಿಂದ ಸೊಳ್ಳೆಗಳು ಹೆಚ್ಚಾಗಿ 22ನೇ ಅಡ್ಡರಸ್ತೆಯ ಕಡೆಗೆ ಬರುತ್ತಿದ್ದು, ಆಗಾಗ್ಗೆ ಫಾಗಿಂಗ್ ಕೈಗೊಳ್ಳುವಂತೆ ಕೋರಲಾಯಿತು.

**ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು,**
**ಆರೋಗ್ಯ ಇಲಾಖೆ, ಬಿ.ಬಿ.ಎಂ.ಪಿ., ಈಜೀಪುರ**

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಎನ್.ಜಿ.ವಿ.ಯಲ್ಲಿ ನಿರ್ಮಿಸಲಾಗಿರುವ ರೂ.160.00 ಕೋಟಿ ವೆಚ್ಚದ ವೆಟ್‌ವೆಲ್‌ನ ಕ್ಷಮತೆಯನ್ನು ಪರಿಶೀಲಿಸಿ ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಪಂಪ್‌ಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಮುಂದಿನ ವಾರ್ಡ್ ಸಮಿತಿ ಸಭೆಯ ಮುಂದೆ ವರದಿಯನ್ನು ನೀಡುವಂತೆ ಕೋರಲಾಯಿತು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬಿ.ಡಬ್ಲ್ಯೂ.ಎಸ್.ಎಸ್.ಬಿ, ಡಬ್ಲ್ಯೂಡಬ್ಲ್ಯೂ.ಎಂ.**

ಶ್ರೀ ಲಕ್ಷ್ಮೀಪತಿ ರವರು ಮಾತನಾಡಿ, ಪ್ರಸ್ತುತ ಬೃಹತ್ ಮಳೆನೀರುಗಾಲುವೆಯಲ್ಲಿ Automated Flood alarm System ಗಳನ್ನು ಅಳವಡಿಸುವ ಬಗ್ಗೆ ಬೃಹತ್ ಮಳೆನೀರುಗಾಲುವೆಯ ಇಂಜಿನಿಯರ್‌ಗಳಿಗೆ ಮಾಹಿತಿಯನ್ನು ಒದಗಿಸುವಂತೆ ಕೋರಲಾಗಿ, ದೂರವಾಣಿ ಮುಖಾಂತರ ಶ್ರೀ ಮೆಹಬೂಬ್ ಖಾನ್, ಸಹಾಯಕ ಅಭಿಯಂತರರು, ಬೃಹತ್ ಮಳೆನೀರುಗಾಲುವೆ ರವರು ಉತ್ತರಿಸಿ, ಪ್ರಸ್ತುತ ಕೆ–100 ವ್ಯಾಲಿಯ Water way project ಕಾಮಗಾರಿ ಚಾಲ್ತಿಯಲ್ಲಿದ್ದು, ಅದರಲ್ಲಿ ಪೂರ್ಣಗೊಳ್ಳುವ ಸಂದರ್ಭದಲ್ಲಿ Automated Flood alarm System ಗಳನ್ನು ಅಳವಡಿಸಲಾಗುವುದೆಂದು ಸಭೆಗೆ ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಬೃಹತ್ ಮಳೆನೀರುಗಾಲುವೆ, ಬೃ.ಬೆಂ.ಮ.ಪಾ**



Scanned by CamScanner

ಶ್ರೀ ಅನಿಲ್ ಕುಮಾರ್ ರವರು ಮಾತನಾಡಿ, ಈಜೀಪುರದಲ್ಲಿ ಪೈಪ್‌ಲೈನ್ ಮುಖ್ಯರಸ್ತೆಯಲ್ಲಿ ಈ ಹಿಂದೆ 1970 ರ ದಶಕದಲ್ಲಿ 2000 ಎಂ.ಎಂ. ವ್ಯಾಸದ ಯು.ಜಿ.ಡಿ. ಕೊಳವೆಯನ್ನು ಅಳವಡಿಸಿದ್ದು, ಪ್ರಸ್ತುತ ಶಿಥಿಲಗೊಂಡ ಅವಸ್ಥೆಯಲ್ಲಿದ್ದು, ಇದನ್ನು ಸರಿಪಡಿಸಿ, ಎನ್.ಜಿ.ವಿ. ವೆಟ್‌ವೆಲ್ ನಿಂದ ಚಲಘಟ್ಟದವರೆಗೂ ಇರುವ ಈ ಕೊಳವೆ ಮಾರ್ಗವನ್ನು ಸದುಪಯೋಗಪಡಿಸಿಕೊಂಡು ಚಲಘಟ್ಟದಲ್ಲಿರುವ ಶುದ್ಧಿಕರಣ ಘಟಕದವರೆಗೂ ಈ ಕೊಳವೆ ಮುಖಾಂತರ ಪಂಪ್ ಮಾಡಿದರೆ ಈಜೀಪುರ ಮತ್ತು ಎಸ್.ಟಿ.ಬೆಡ್ ಪ್ರದೇಶಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ನೀರು ಉಕ್ಕುವುದನ್ನು ತಪ್ಪಿಸಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

**ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು,**
**ಬಿ.ಡಬ್ಲ್ಯೂ.ಎಸ್.ಎಸ್.ಬಿ, ಡಬ್ಲ್ಯೂ.ಡಬ್ಲ್ಯೂ.ಎಂ**

ಶ್ರೀ ವಸಂತ್ ಕುಮಾರ್ ರವರು ಮಾತನಾಡಿ, ಈಜೀಪುರ ವ್ಯಾಪ್ತಿಯ ಮನೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ಮನೆಗಳು ಮತ್ತು ಸ್ವತ್ತುಗಳಿಗೆ ಸಂಖ್ಯೆ ನೀಡಬೇಕೆಂದು ಸಭೆಗೆ ಕೋರಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿಯಾದ ಶ್ರೀಮತಿ ರೂಪ ರವರು ಮಾತನಾಡಿ, ಬಿಟಿಎಂ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಎಲ್ಲಾ ಮನೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ಸ್ವತ್ತುಗಳಿಗೆ ಸಂಖ್ಯೆ ನೀಡುವ ಬಗ್ಗೆ ಮೇಲಾಧಿಕಾರಿಗಳಿಗೆ ಗಮನಕ್ಕೆ ತರಲಾಗುವುದೆಂದು ತಿಳಿಸಿದರು.

ಕೊನೆಯದಾಗಿ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/09/2022

(ಪ್ರದೀಪ್ ಕುಮಾರ್ .ಆರ್)
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್–148 ಈಜೀಪುರ

(ಶ್ರೀಮತಿ ರೂಪ)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್–148 ಈಜೀಪುರ



Scanned by CamScanner

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ.ಸ.ಕಾ.ನಿ.ಅ/ಕೋ.ಉ.ವಿ/ಪಿ.ಆರ್/20 /2022-23

ಸಹಾಯಕ ಕಾರ್ಯಪಾಲಕ ಅಭಿಯಂತರರರ ಕಛೇರಿ,
ಕೋರಮಂಗಲ ಉಪವಿಭಾಗ,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು, ದಿನಾಂಕ: 19/09/2022

## ಸಭೆ ಸೂಚನಾ ಪತ್ರ

ಮಾನ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ.ಬಿ12(5)/ಪಿಆರ್/35/2020-21, ದಿನಾಂಕ:21-09-2020ರ ರೀತ್ಯಾ ವಾರ್ಡ್ ಸಂಖ್ಯೆ.148 (ಈಜೀಪುರ) ವ್ಯಾಪ್ತಿಯ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ **ದಿನಾಂಕ:21.09.2022 ರಂದು ಬೆಳಗ್ಗೆ 11.00 ಕ್ಕೆ ಸ್ಥಳ: ಬಿ.ಬಿ.ಎಂ.ಪಿ ಕಛೇರಿ, Hot mix plant, 80 feet road, ಈಜೀಪುರ, ಬೆಂಗಳೂರು** ಇಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಕಮಿಟಿ ಸಭೆಯನ್ನು ನಡೆಸಲು ನಿರ್ಧರಿಸಲಾಗಿದ್ದು, ಸದರಿ ದಿನಾಂಕದಂದು ತಾವುಗಳು ತಪ್ಪದೇ ಹಾಜರಾಗಲು ಈ ಮೂಲಕ ತಿಳಿಸಲಾಗಿದೆ ಹಾಗೂ ತಮ್ಮ ಗೈರುಹಾಜರಿಯ ಬಗ್ಗೆ ಮಾನ್ಯ ಆಯುಕ್ತರು ರವರ ಗಮನಕ್ಕೆ ತರಲಾಗುವುದು.

19/09/2022

ಕಾರ್ಯದರ್ಶಿ, ವಾರ್ಡ್ ಕಮಿಟಿ & ಸಹಾಯಕ ಅಭಿಯಂತರರು
ವಾರ್ಡ್ ನಂ.148 ಈಜೀಪುರ

ಪ್ರತಿಯನ್ನು:-

1. ಜಂಟಿ ಆಯುಕ್ತರು, ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ದಕ್ಷಿಣ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು, ಬಿ.ಟಿ.ಎಂ. ಲೇಔಟ್, ಬಿ.ಬಿ.ಎಂ.ಪಿ
4. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ. ವಿಭಾಗ ರವರಿಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ, ಬಿ.ಬಿ.ಎಂ.ಪಿ. ಬೆಂಗಳೂರು.
6. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿ.ಬಿ.ಎಂ.ಪಿ
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ಬಿ.ಟಿ.ಎಂ. ಲೇಔಟ್ ವಿಭಾಗ ರವರಿಗೆ ಸಲ್ಲಿಸುತ್ತಾ, ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಹಾಗೂಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆದಾರರೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
8. ಸಹ ಕಂದಾಯ ಅಧಿಕಾರಿಗಳು, ಕಂದಾಯ ಇಲಾಖೆ, ಕೋರಮಂಗಲ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ಬೆಂಗಳೂರು.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ, ಬಿ.ಬಿ.ಎಂ.ಪಿ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ಬೆಂಗಳೂರು
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ, ದಕ್ಷಿಣ ವಲಯ , ಬೆಂಗಳೂರು
13. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ದಕ್ಷಿಣ ವಲಯ, ಬೆಂಗಳೂರು.
14. ಠಾಣಾಧಿಕಾರಿಗಳು, ವಿವೇಕಾನಗರ ಪೋಲಿಸ್ ಠಾಣೆ ರವರಿಗೆ ಸಲ್ಲಿಸಿ, ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
15. ಠಾಣಾಧಿಕಾರಿಗಳು, ಕೋರಮಂಗಲ ಪೋಲಿಸ್ ಠಾಣೆ ರವರಿಗೆ ಸಲ್ಲಿಸಿ, ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
16. ಕಛೇರಿ ಕಡತಕ್ಕೆ.

Scanned by CamScanner